ದಿನಾಂಕಃ 10.11.2025 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಕೆ ಟಿ ವಕೀಲರಿಂದಃ**

1. ಏನು ಪರಿಹಾರ ಕೋರಿರುತ್ತೀರಾ ಎಂದರೆ ಜಮೀನಿನ ಸರ್ವೆಗೆ ತೊಂದರೆ ಕೊಡುತ್ತಿದ್ದಾರೆ ಎಂದು. ದಾವಾ ಸರ್ವೆ ನಂ. 189/11 ಇದ್ದು ವಿಸ್ತೀರ್ಣ 1 ಎಕರೆ 39 ಗುಂಟೆಗೆ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಖಾತೆಯಲ್ಲೂ ವಿಸ್ತೀರ್ಣ 1 ಎಕರೆ 39 ಗುಂಟೆ ಇರುತ್ತದೆಯೇ ಎಂದರೆ ಹೌದು. ಸರ್ವೆ ನಂ. 189/11 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ 1 ಎಕರೆ 39 ಗುಂಟೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಕಾಶೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಚಕ್ಕುಬಂದಿ ಏನು ಎಂದರೆ 18 ವರೆ ಗುಂಟೆಗೆ ದಾವೆ ಹಾಕಿರುತ್ತೇನೆ ಅದರ ಚಕ್ಕುಬಂದಿಃ ಪೂರ್ವಕ್ಕೆಃ ಶಾಂತಿಮೇರಿ ರವರ ತೋಟ, ಪಶ್ಚಿಮಕೆಃ ಚೌರಪ್ಪರವರ ತೋಟ ಮತ್ತು ಮನ, ಉತ್ತರಕ್ಕೆಃ ಸರ್ಕಾರಿ ರಸ್ತೆ, ದಕ್ಷಿಣಕ್ಕೆಃ ಆಲ್ವಾನ್ಸೊ ಮತ್ತು ಜೊಸೇಫ್ ರವರ ಜಮೀನು. ಸರ್ವೆ ನಂ. 189/11 ರ ಒಟ್ಟು ವಿಸ್ತೀರ್ಣ ದಲ್ಲಿ 1ನೇ ಪ್ರತಿವಾದಿಯ ಮನೆ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಗೊತ್ತಿಲ್ಲ. 2ನೇ ಪ್ರತಿವಾದಿ ಸದರಿ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸ್ವಾಧೀನದಲ್ಲಿ ಇರುವುದಿಲ್ಲ, ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಮನೆ ಯಾರದು ಎಂದರೆ 2ನೇ ಪ್ರತಿವಾದಿ. ಅದನ್ನು ನಿಡಿ-1 ಎಂದು ಗುರ್ತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ 2ನೇ ಪ್ರತಿವಾದಿಯ ಮನೆಯ ಹಿಂಭಾಗ ಕಾಣಿಸುತ್ತದೆ ಎಂದರೆ ಸರಿ, ಅದನ್ನು ನಿಡಿ-2 ಎಂದು ಗುರ್ತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಸರ್ವೆ ನಂ. 189/11 ರ ದಕ್ಷಿಣ ಭಾಗಕ್ಕಿರುವ ರಸ್ತೆ ಕಾಣಿಸುತ್ತಿದೆ ಎಂದರೆ ಸರಿ, ಸದರಿ ಭಾವಚಿತ್ರವನ್ನು ನಿಡಿ-3 ಎಂದು

ಗುರ್ತಿಸಲಾಯಿತು. ನಿಡಿ-3 ರಲ್ಲಿ ಕಾಣಿಸುತ್ತಿರುವ ಹೆಂಚಿನ ಮನೆ 2ನೇ ಪ್ರತಿವಾದಿಯ ಮನೆ ಎಂದರೆ ಸರಿ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ 2ನೇ ಪ್ರತಿವಾದಿಯ ಮನೆಗೆ ತಲುಪಲು ಕಾಲುದಾರಿ ಕಾಣಿಸುತ್ತಿದೆ ಎಂದರೆ ಸರಿ. ಅದನ್ನು ನಿಡಿ-4 ಎಂದು ಗುರ್ತಿಸಲಾಯಿತು. ಸದರಿ 2ನೇ ಪ್ರತಿವಾದಿಯ ಮನೆಯು 40 ವರ್ಷದ ಹಿಂದಿನ ಮನೆ ಎಂದರೆ ಗೊತ್ತಿಲ್ಲ. ಸದರಿ ಮನೆ ಅಕ್ಕಪಕ್ಕ ಕಾಫಿ ಮೆಣಸು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗ ನಮ್ಮ ತೋಟ ಆಗಿರುತ್ತದೆ. ಸದರಿ ಮನೆ 20 ಗುಂಟೆ ಜಾಗದಲ್ಲಿ ನಿರ್ಮಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ 20 ಗುಂಟೆ ಜಾಗದ ಸುತ್ತ ಕಟಿಂಗ್ಸ್ ಬೇಲಿಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ಸದರಿ ಮನೆಗೆ ದಾಖಲಾತಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಗೆ ವಿದ್ಯುಚ್ಛಕ್ತಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯ ಪೂರ್ವಕ್ಕೆ ಚೌರಮ್ಮ ರವರ ಜಮೀನು ಆನಂತರ ಆಲ್ವನ್ಸೋ ರವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಿಡಿ-4 ರಲ್ಲಿ ಕಾಣಿಸುತ್ತಿರುವ ಕಾಲುದಾರಿ ಇದೆ ಎಂದರೆ ಸರಿ. ಉತ್ತರಕ್ಕೆ ನೀರಿನ ಕಾಲುವೆ, ನಂತರ 2ನೇ ಪ್ರತಿವಾದಿ ಜಮೀನು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ.

2. ಒ ಎಸ್ ನಂ. 103/17 ರಲ್ಲಿ 2ನೇ ಪ್ರತಿವಾದಿಗೆ ಸೇರಿದ 4 ಗುಂಟೆಯನ್ನು ಸಹ ಸೇರಿಸಿಕೊಂಡಿರುತ್ತೇವೆ ಎಂದರೆ ಸರಿ. 4 ಗುಂಟೆಯ ಸರ್ವೆ ನಂ. 189/7 ಎಂದರೆ ಸರಿ. ಆನಂತರ 2ನೇ ಪ್ರತಿವಾದಿ ಸದರಿ ಹಿಸ್ಸಾ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ರಾಜಿ ಮಾಡಿಕೊಂಡು 2ನೇ ಪ್ರತಿವಾದಿಗೆ 4 ಗುಂಟೆಯನ್ನು ಬಿಟ್ಟಿರುತ್ತೇವೆ ಎಂದರೆ ಸರಿ. ಮೂಲತಃ ಸರ್ವೆ ನಂ. 189/11 ನನ್ನ ತಂದೆ ಮತ್ತು ಚಿಕ್ಕಪ್ಪರವರ ಹೆಸರಿನಲ್ಲಿದೆ. ಹಿಸ್ಸೆಯಂತೆ ನಮ್ಮ ಹೆಸರಿಗೆ ಖಾತೆ ಬಂದ ನಂತರ 2ನೇ ಪ್ರತಿವಾದಿಗೆ 20 ಗುಂಟೆ ಜಾಗವನ್ನು ಮಾಡಿಕೊಡುವುದಾಗಿ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಚಿಕ್ಕಪ್ಪ. 20 ಗುಂಟೆ ಜಮೀನನ್ನು ಚೌರಪ್ಪರವರ ಹೆಸರಿಗೆ

ಖಾತೆ ಮಾಡಿಸಿದ ನಂತರ 2ನೇ ಪ್ರತಿವಾದಿಗೆ ಖಾತೆ ಮಾಡಿಕೊಡುವುದಾಗಿ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಖಾತೆ ಮಾಡಿಕೊಡದೇ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪರಿಹಾರ ಪಡೆದುಕೊಂಡು ಕಾನೂನು ಬಾಹಿರವಾಗಿ 2ನೇ ಪ್ರತಿವಾದಿಯನ್ನು ಹೊರಹಾಕಲು ಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.